ಶ್ರೀ ಬಿ. ಹುಚ್ಚೇಗೌಡ.—ಒಬ್ಬರಿಗಾದರೂ ಕೊಟ್ಟಿದ್ದೀರಿ ಎಂಬುದಕ್ಕೆ ತಪ್ಪಿಸಲು ತರಿಸಿ ತಿಳಿಸುತ್ತೀರಾ? ಇವತ್ತಿನವರಿಗೂ ಒಬ್ಬರಿಗೂ ಕೊಟ್ಟಿಲ್ಲ.

ಡಾ॥ ಆರ್. ನಾಗನಗೌಡ.—ವಿಚಾರಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—ಮಲೆನಾಡಿನಲ್ಲಿರುವವರಿಗೆ ಮಲೆನಾಡು allowance ಕೊಡುವುದಕ್ಕೆ ಸರ್ಕಾರದವರು ಹುಕುಂ ಮಾಡುತ್ತಾರೆಯೇ?

ಡಾ॥ ಆರ್. ನಾಗನಗೌಡ.—ಅದನ್ನು ವಿಚಾರಿಸುತ್ತೇನೆ. ಒಂದೂ ನಾನು ಹೇಳುವುದಕ್ಕಾಗುವುದಿಲ್ಲ.

Gazetted Officers in the Electrical Department.

Q.—842. **Sri Mulka GOVINDA REDDY** (Chitaldrug).—

Will the Government be pleased to state:—

(*a*) the number and names of Gazetted Officers in the Electrical Department;

(*b*) the dates on which they were appointed along with their qualifications;

(*c*) whether any of them were sent abroad for foreign studies;

(*d*) whether promotions were made; if so, on what basis?

A.—**Dr. R. NAGAN GOWDA** (Minister for Agriculture).—

(*a*) and (*b*) Please see pages 227 to 234 of the Mysore Half-Yearly Civil List as corrected upto 1st October 1954 (copy placed on the Table).

(*c*) Yes.

(*d*) Promotions are made on the basis of seniority and merit.

ಶ್ರೀ ಬಿ. ಹುಚ್ಚೇಗೌಡ.—(*d*) ಪ್ರಶ್ನೆಗೆ ಬಡ್ತಿಗಳನ್ನು ಸೀನಿಯಾರಿಟಿ ಮತ್ತು ಯೋಗ್ಯತೆಗಳನ್ನು ಗಣನೆಗೆ ತೆಗೆದುಕೊಂಡು ಕೊಡುತ್ತೇವೆಂದು ಹೇಳಿದ್ದೀರಿ. ಬಡ್ತಿಗಳನ್ನು qualification ನೋಡಿ ಕೊಂಡು ಕೊಡುತ್ತೀರಾ? ಅಥವಾ ದಕ್ಷತೆ ನೋಡಿ ಕೊಡುತ್ತೀರಾ?

ಒಬ್ಬೊಬ್ಬರ individualc ase consider ಮಾಡಬೇಕಾದರೆ ಒಂದು ಸರ್ತಿ seniority consider ಮಾಡುವುದು, ಒಂದು ಸರ್ತಿ qualification, ಒಂದು ಸರ್ತಿ ಮೆರಿಟ್ consider ಮಾಡುವುದು—ಹೀಗೆ ಇಲಾಖೆಯಲ್ಲಿ ಮಾಮೂಲಾಗಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಈ 3 ವಿಷಯಗಳನ್ನೂ ಒಟ್ಟಿಗೆ ತೆಗೆದುಕೊಳ್ಳಬೇಕು.

ಶ್ರೀ ಬಿ. ಹುಚ್ಚೇಗೌಡ.—ಒಂದೊಂದೂ ಹೀಗೆ arbitrary ಆಗಿ ಮಾಡಿದ್ದಾರೆ ಎಂದು ಅನೇಕ ದೂರುಗಳಿವೆ. ಇದಕ್ಕೋಸ್ಕರ ಸರ್ಕಾರದವರು ಸಮಿತಿ ನೇಮಿಸಿ, ಈ ಇಲಾಖೆಯಲ್ಲಿ ಹೆಚ್ಚು ಕಡಮೆ ಆಗಿರುವುದನ್ನು ಸರಿಮಾಡುವುದಕ್ಕೆ ಸಾಧ್ಯವೇ?

ಡಾ॥ ಆರ್. ನಾಗನಗೌಡ.—ತಮಗೆ ಗೊತ್ತಿರುವ ಹಾಗೆ ಹೋದ ವರುಷ ಜನವರಿ 19 ನೇ ತಾರೀಖು ಒಂದು Government order ಹೊರಡಿಸಿ, ಅದರ ಮೇಲೆ allocation statement ತಯಾರು ಮಾಡಿಸಿ, ಆಮೇಲೆ ಅದನ್ನು Public Service Commission ಗೆ ಕಳುಹಿಸಿಕೊಟ್ಟಿದ್ದಾರೆ. ಅಲ್ಲಿಂದ ಬಂದ ಮೇಲೆ ಈ ರೀತಿ ಯಾವ complaints ಒಂದೂ ಇರುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಅನೇಕರಿಗೆ ಅನ್ಯಾಯವಾಗಿರುವುದನ್ನು ಸರಿಮಾಡುವುದಕ್ಕೆ ಭರವಸೆ ಕೊಡುತ್ತೀರಾ?

ಡಾ॥ ಆರ್. ನಾಗನಗೌಡ.—ಅದು Public Service Commission ಗೆ ಹೋಗಿದೆ. The whole subject will be considered soon.

Edigere Forest of Yagati Hobli, Kadur Taluk.

Q.—904. **Sri Y. M. CHANDRASEKHARIAH** (Kadur).—

Will the Government be pleased to state:—

(*a*) the area in acres of Edigere Forest of Yagati Hobli in Kadur Taluk;

(*b*) the annual income from this forest;

(*c*) the annual expenditure on account of its establishment and maintenance;

(*d*) the number of landless people in the neighbouring villages who have requested for grant of lands from this forest:

(*e*) the number of villages without gomal the residents of which have requested grant of lands for gomal in this forest?

A.—**Dr. R. NAGAN GOWDA** (Minister for Agriculture).—

(*a*) 1,405·425 acres.

(*b*) Rs. 117-8-0.

(*c*) Rs. 504 on Establishment and Rs. 34-6-0 for maintenance.

(*d*) 46.

(*e*) None.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕಡೂರು ತಾಲ್ಲೂಕಿನ ಎಡಿಗೆರೆ ಫಾರೆಸ್ಟ್ ತಾವು ನೋಡಿದ್ದೀರಾ?

ಡಾ॥ ಆರ್. ನಾಗನಗೌಡ.—ನಾನು ನೋಡಿಲ್ಲ; ತಾವು ಕರೆದುಕೊಂಡು ಹೋಗಿಲ್ಲ. ನಾನು ನೋಡಿಲ್ಲ.